
ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಆರ್ವೆಲ್‌ನ ನಿಜ

ಡೋರಿಯನ್ ಲಿನ್ಸ್ಕಿಯವರ 'ದ ಮಿನಿಸ್ಟ್ರಿ ಆಫ್ ಟ್ರೂಥ್' ಆಸಕ್ತಿ ಹುಟ್ಟಿಸುವ ಒಂದು ಪುಸ್ತಕ. ಜನರ ಜೀವನಗಾಥೆಯ ಪುಸ್ತಕಗಳನ್ನು ಗಮನಿಸಿದ್ದೇವಾದರೂ ಒಂದು ಪುಸ್ತಕದ ಜೀವನಗಾಥೆಯನ್ನು ಗ್ರಹಿಸಿರುವುದು ಅಪರೂಪ.



ಜಾರ್ಜ್ ಆರ್ವೆಲ್‌ನ ಇಡೀ ಬರವಣಿಗೆಯಲ್ಲಿ ಎರಡು ಕಾದಂಬರಿಗಳು ಬಹುಚರ್ಚಿತವಾಗಿವೆ. 'ಅನಿಮಲ್ ಫಾರ್ಮ್' ನಮ್ಮ ಪ್ರಜಾತಾಂತ್ರಿಕ ಜಗತ್ತಿನ ಒಂದು ಕುಹಕದಂತೆ ಕಾಣುತ್ತದೆ. 'ನೈಂಟೀನ್ ಎಯ್ಟಿಫೋರ್' (1984) ಸದಾ ಪ್ರಸ್ತುತ ಎನ್ನಿಸುವಂತಹ, ಆಗಾಗ ತಲೆಯೆತ್ತುವ ನಿರಂಕುಶತೆಯನ್ನು ಅನೇಕ ಮಜಲುಗಳಲ್ಲಿ ಪ್ರಸ್ತಾಪಿಸುವ ಗಟ್ಟಿಯಾದ ಕಾದಂಬರಿ. ಸಮಕಾಲೀನ ರಾಜಕೀಯ ಜಗತ್ತಿನಲ್ಲಿ ಯಾವುದೇ ಘಟನೆಯಾದರೂ, ಯಾವುದೇ ರೀತಿಯ ಅಧಿಕಾರಪಲ್ಲಟವಾದರೂ 'ಅನಿಮಲ್ ಫಾರ್ಮ್' ಮತ್ತು '1984' ಕೃತಿಗಳಲ್ಲಿನ ಯಾವುದೋ ಮಾತು ಪ್ರಸ್ತುತವೆನ್ನಿಸುತ್ತದೆ. ಮುಖ್ಯವಾಗಿ ಗೌಪ್ಯತೆ ಮತ್ತು ಖಾಸಗಿತನ ಮುಖ್ಯವಾಗುತ್ತಿರುವ ಈ ಸಮಯದಲ್ಲಿ '1984'ರಲ್ಲಿ ಬರುವ ದೊಡ್ಡ ಟೀವಿ ಸ್ಕ್ರೀನುಗಳಲ್ಲಿ ನಮ್ಮನ್ನು ಗಮನಿಸುತ್ತಿರುವ ಬಿಗ್ ಬ್ರದರ್ ಮಾತು ಆಗಾಗ ಕೇಳಿಬರುತ್ತದೆ. ರಾಜಕೀಯದಲ್ಲಿ ಯಾವುದೇ ಮಹತ್ವದ ಘಟನೆ ಘಟಿಸಿದಾಗ ಈ ಎರಡೂ ಕಾದಂಬರಿಗಳು ಮತ್ತೆ ಮತ್ತೆ ತಿರುವಿಹಾಕಲು ಪ್ರೇರೇಪಿಸುತ್ತವೆ. ಈ ಹಿನ್ನೆಲೆಯಲ್ಲಿ ಈಚೆಗೆ ಪ್ರಕಟಗೊಂಡ ಡೋರಿಯನ್ ಲಿನ್ಸ್ಕಿಯವರ 'ದ ಮಿನಿಸ್ಟ್ರಿ ಆಫ್ ಟ್ರೂಥ್' ಆಸಕ್ತಿ ಹುಟ್ಟಿಸುವ ಒಂದು ಪುಸ್ತಕವಾಗಿದೆ. ಜನರ ಜೀವನಗಾಥೆಯ ಪುಸ್ತಕಗಳನ್ನು ಗಮನಿಸಿದ್ದೇವಾದರೂ ಒಂದು ಪುಸ್ತಕದ ಜೀವನಗಾಥೆಯನ್ನು ಗ್ರಹಿಸಿರುವುದು ಅಪರೂಪ. ಈ ಹಿನ್ನೆಲೆಯಲ್ಲಿ ಆರ್ವೆಲ್ ಕಾದಂಬರಿಯ ರಾಜಕೀಯ ಮಜಲುಗಳನ್ನು ಮತ್ತು ಅದನ್ನು ಪ್ರಕಟವಾದಾಗಿನಿಂದ ಈವರೆಗೆ ಹೇಗೆ ಅರ್ಥೈಸಿ ತಮ್ಮ ತಮ್ಮ ಕಾಲಕ್ಕೆ ಪ್ರಸ್ತುತವೆನ್ನಿಸುವಂತೆ ಮಂಡಿಸಿ, ಅದರ ಅರ್ಥವಿಸ್ತಾರಗೊಳಿಸುತ್ತಿರುವದರ ಬಗ್ಗೆ ಲಿನ್ಸ್ಕಿ ಬರೆಯುತ್ತಾರೆ.

ಕಾದಂಬರಿಯನ್ನು ರಚಿಸುತ್ತಿದ್ದಾಗ ಆರ್ವೆಲ್ ಅದಕ್ಕೆ ಕೊಟ್ಟಿದ್ದ ಹೆಸರು 'ಲಾಸ್ಟ್ ಮ್ಯಾನ್ ಇನ್ ಯುರೋಪ್'. ಅದೇ ಹೆಸರಿನಲ್ಲಿ ಕಾದಂಬರಿ ಪ್ರಕಟಗೊಂಡಿದ್ದರೆ ಇಷ್ಟು ಸುದ್ದಿ ಮಾಡುತ್ತಿತ್ತೇ ಎನ್ನುವುದು ಆಸಕ್ತಿಯ ಪ್ರಶ್ನೆ. ಆ ಕಾಲಕ್ಕೆ ಭವಿಷ್ಯದ ಕರಾಳತೆ, ತಂತ್ರಜ್ಞಾನದ ಆಕ್ರಾಮಕ ಬಳಕೆಯ ಬಗ್ಗೆ ಸಾಹಿತ್ಯ ರಚಿಸುತ್ತಿದ್ದವರು ಹಲವರಿದ್ದರು. ಎಚ್.ಜಿ. ವೆಲ್ಸ್, ಆಲ್ಡಸ್ ಹಕ್ಸ್ಲಿ ಈ ನಿಟ್ಟಿನಲ್ಲಿ ಹೆಚ್ಚಿನ ಮಹತ್ವ ಪಡೆದಿದ್ದರು. ಆದರೆ ಆರ್ವೆಲ್ ಕಾದಂಬರಿಗೆ ನಿಖರವಾದ ಸಮಯವನ್ನು ಕೊಟ್ಟಿದ್ದರಿಂದ ಆ '1984'ರ ವರ್ಷವನ್ನು